ಗೋಕಾಕ ಬಳಿಯ ಗೊಡಚಿನಮಲ್ಕಿ
ಜಲಪಾತದ ನಯನ ಮನೋಹರ ನೋಟ



ಜಲಪಾತ ಎರಡೂ ತದ್ರೂಪಿಗಳು. ನದಿ ನೀರಿನಿಂದಲೇ ಈ ಎರಡೂ ಜಲಪಾತಗಳು ಜೀವತಳೆಯುತ್ತವೆ. ಗೋಕಾಕ ಜಲಪಾತ 180 ಅಡಿ, ನಯಾಗರಾ ಜಲಪಾತ 188 ಅಡಿ ಎತ್ತರದಿಂದ ಧುಮುಕುತ್ತವೆ. ನದಿಗಳ ಹರವಿನಿಂದಲೇ 'U' ಆಕಾರದ ಕಂದಕಗಳನ್ನು ಎರಡೂ ನದಿಗಳು ಸೃಷ್ಟಿಸಿವೆ. ಯಾವ ದಿಕ್ಕಿನಿಂದ ಚಿತ್ರ ಕ್ಲಿಕ್ಕಿಸಿದರೂ ಒಂದೇ ರೀತಿಯಾಗಿ ಕಾಣಿಸುವುದು ಇವುಗಳ ವಿಶೇಷ.

ಗೋಕಾಕ ಎಂದಾಕ್ಷಣ ಕರದಂಟಿನ ಸ್ವಾದ, ಜಲಪಾತದ ಆಹ್ಲಾದ ನೆನಪಾಗದೇ ಇರದು. 659 ಅಡಿ ಉದ್ದವಿರುವ ಈ ಜಲಪಾತ ಭಾರತದ ಅತಿ ಉದ್ದದ ಜಲಪಾತಗಳಲ್ಲಿ ಒಂದು. ನಗರದ ಹತ್ತಿರದಲ್ಲೇ ಇರುವ ಈ ಜಲಪಾತ ಮನೆಯ ಮುಂದಿನ ರಂಗೋಲಿಯಂತೆ ಇಡೀ ಊರಿನ ಅಂದವನ್ನು ನೂರಡಿ ಹೆಚ್ಚಿಸಿದೆ.

ಗೋಕಾಕ ರೋಡ್ ರೈಲು ನಿಲ್ದಾಣದಿಂದ 5 ಕಿ.ಮೀ. ದೂರದಲ್ಲಿರುವ ಈ ಜಲಪಾತಕ್ಕೆ ಘಟಪ್ರಭಾ ನದಿಯೇ ತಾಯಿ. ಘಟಪ್ರಭೆಯನ್ನು ಹಿಡಿದಿಟ್ಟುಕೊಂಡ ಹಿಡಕಲ್ ಜಲಾಶಯವೇ ತಂದೆ. ನದಿ ಉಕ್ಕಿ ಹರಿದಾಗ ಮಾತ್ರ ಜೀವಕಳೆ ತುಂಬುತ್ತದೆ. ಬೇಸಿಗೆಯಲ್ಲಿ ಬತ್ತುವ ನದಿಯ ಜತೆಗೇ ಜಲಪಾತವೂ ಜಿನುಗುತ್ತದೆ. ಆಗಲೂ ಬೃಹತ್ ಬಂಡೆಗಳು, ಆಳವಾದ ಕಂದಕ ಹೊರಜಗತ್ತಿಗೆ ತೆರೆದುಕೊಂಡು ಸೌಂದರ್ಯ ಹೊರಸೂಸುತ್ತದೆ. ಜಲಾಶಯದಿಂದ ನೀರು ಹೊರಬಿಟ್ಟರಂತೂ ಸೊಕ್ಕೇರಿ ಧುಮುಕುವ ನೀರು ನೋಡಲು ಧೈರ್ಯ ಇಮ್ಮಡಿಸಬೇಕು. ಸುಮಾರು 500 ಅಡಿಯಷ್ಟು ಅಗಲವಾಗಿ ಜಲಪಾತವಾಗುತ್ತಿದ್ದರೆ; ಅದರ ಶಬ್ದ ಕಿಲೋಮೀಟರ್ ದೂರದಲ್ಲೇ ಕೇಳಿಸುತ್ತದೆ.

## ಎರಡು ರಾಜ್ಯಗಳ ಹೊಕ್ಕಳುಬಳ್ಳಿ 'ಕ್ಷೀರಸಾಗರ'

ದೂಧ್‌ಸಾಗರ ಜಲಪಾತ ಕರ್ನಾಟಕ– ಗೋವಾ ರಾಜ್ಯಗಳ ಹೊಕ್ಕಳುಬಳ್ಳಿ ಇದ್ದಂತೆ. ಜಲಪಾತದ ಮೇಲ್ಭಾಗ ಉತ್ತರಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿದೆ. ಆದರೆ, ಜಲಪಾತ ನುಗ್ಗಿ ಹರಿಯುವ ಪ್ರದೇಶ ಗೋವಾ ರಾಜ್ಯಕ್ಕೆ ಸೇರಿದೆ.

ಜಲಪಾತದಿಂದ ಮೋಕ್ಷ ಪಡೆಯುವ ನೀರು ಮುಂದೆ ಸಾಗಿ ಗೋವಾದ ಮಾಂಡೋವಿ (ಕರ್ನಾಟಕದಲ್ಲಿ ಇದನ್ನು ಮಹದಾಯಿ ಎನ್ನುತ್ತಾರೆ) ನದಿಯ ಮೂಲಕ ಸಮುದ್ರ ಸೇರುತ್ತದೆ.

ಗಗನಚುಂಬಿ ಪರ್ವತಗಳ ಸಾಲು ಹಾಗೂ ಆಳವಾದ ಕಣಿವೆ ಒಂದೇ ಕಡೆ ಕಾಣಿಸುವುದು ಇಲ್ಲಿನ ವಿಶೇಷ. 1,017ಅಡಿ (310 ಮೀಟರ್) ಅಂತರದಿಂದ ಬೀಳುವ ನೀರು ನೆಲಕ್ಕೆ ಬಡಿದು ಅದಕ್ಕಿಂತಲೂ ಆಳಕ್ಕೆ ಇಳಿದುಹೋಗುತ್ತದೆ. ಬೃಹತ್ ಬೆಟ್ಟದ ಮೇಲಿಂದ ದಬದಬನೇ ಬೀಳುವ ನೀರು ಶುಭ್ರ ಹಾಲಿನಂತೆಯೇ ಕಾಣಿಸುತ್ತದೆ. ಇದೇ ಕಾರಣಕ್ಕೆ ಈ ಶ್ವೇತ ಸುಂದರಿಯನ್ನು ದೂಧ್‌ಸಾಗರ (ಹಾಲಿನ ಸಾಗರ) ಎಂದೇ ಕರೆಯಲಾಗಿದೆ.

ಬಲಕ್ಕೆ ಕಣ್ಣು ಹಾಯಿಸಿದಷ್ಟೂ ರುದ್ರ ರಮಣೀಯ ಪರ್ವತಗಳು, ಅವುಗಳಿಗೆ ದಟ್ಟಹಸಿರು ಸೀರೆ ಉಡಿಸಿದಂಥ ನೋಟ. ಎಡಕ್ಕೆ ನೋಟ ಬೀರಿದರೆ ದೊಡ್ಡ ಕಂದಕಗಳ ಆಳ. ಯಾವಾಗಲೂ ಮುದ ನೀಡುವ ಮಳೆ. ಜಲಪಾತಕ್ಕೆ ಹೊಂದಿಕೊಂಡೇ ಬ್ರಿಟಿಷರು ರೈಲು ಹಳಿ ನಿರ್ಮಿಸಿ ಹೋಗಿದ್ದಾರೆ. ಎತ್ತರದ ಸೇತುವೆ ಮೇಲೆ ರೈಲು ಸಾಗುತ್ತಿದ್ದರೆ ಅದರ ಬುಡದಲ್ಲಿ ನೀರು ಪಾಸಾಗುವುದನ್ನು ಅನುಭವಿಸಿಯೇ ಆನಂದಿಸಬೇಕು.

ಅಬ್ಬಬ್ಬಾ! ಸ್ವರ್ಗದ ತುಣುಕನ್ನು ದೇವತೆಗಳು ಇಲ್ಲಿ ಚೆಲ್ಲಿ ಮರೆತು ಹೋಗಿದ್ದಾರೇನೋ ಎಂಬಂಥ ನೋಟ.

## ರೈಲು ಸಂಚಾರವೇ ರೋಮಾಂಚಕ

ರಾಜ್ಯದಿಂದ ಗೋವಾ ಸಂಪರ್ಕಿಸುವ ಲೋಂಡಾ–ಮಡಗಾಂವ ರೈಲು ಮಾರ್ಗದ ನಡುವಿನ ದೂಧ್‌ಸಾಗರ ಮತ್ತು ಕೊಲೆಂ ನಿಲ್ದಾಣಗಳ ಮಧ್ಯೆ ಈ ಜಲಪಾತವಿದೆ. ರಾಜ್ಯದ ಕೊನೆಯ ರೈಲು ನಿಲ್ದಾಣ ಕ್ಯಾಸಲ್‌ರಾಕ್‌ನಿಂದ ಗೋವಾದ ಕುಲೇಂ ರೈಲು ನಿಲ್ದಾಣದವರೆಗೆ ಅತ್ಯಂತ ಆಳವಾದ ಹಾಗೂ ಇಳಿಜಾರಿನಿಂದ ಕೂಡಿದ ರೈಲು ಮಾರ್ಗ ಅದ್ಭುತವಾಗಿದೆ. 30 ಕಿ.ಮೀ ಅಂತರದ ಈ ಮಾರ್ಗ ಒಟ್ಟು 20 ಸುರಂಗಗಳ ಮೂಲಕ ಸಾಗುತ್ತದೆ.

ಬೃಹತ್ ಬಂಡೆಯೊಳಗೆ ರೈಲು ನುಗ್ಗುವಾಗ ಎದೆ ಝಲ್ ಅನ್ನಿಸುತ್ತದೆ. ಸುರಂಗಕ್ಕೆ ನುಗ್ಗಿದ ಕ್ಷಣಾರ್ಧದಲ್ಲೇ ಕತ್ತಲು ಆವರಿಸಿ, ಕೆಲವೇ ಸೆಕೆಂಡುಗಳಲ್ಲಿ ರೈಲು ಹೊರಬಂದಾಗ ಧುತ್ತೆಂದು ಬೆಳಕು ಬೀಳುತ್ತದೆ.

ಈ ರೀತಿ ಪದೇಪದೇ ಸುರಂಗಗಳನ್ನು ದಾಟಿ ಹೋಗುವ ರೈಲು ಪ್ರಯಾಣವೇ ವಿಶಿಷ್ಟ ಅನುಭವ. ರೈಲು ಇನ್ನೇನು ಬಂಡೆಗೆ ಗುದ್ದಿಯೇ ಬಿಟ್ಟಿತು ಎಂಬಂತೆ ಭಾಸವಾಗುವ ಕ್ಷಣ ಒಂದಾದರೆ, ಬಂಡೆ ದಾಟಿದ ತಕ್ಷಣವೇ ಆಳವಾದ ಕಣಿವೆ ಎದುರಾಗುತ್ತದೆ. ಕಿಟಕಿಯಾಚೆಗೆ ಇಣುಕಿದರೆ ಸಾಕು ರೈಲು ತಂತಿಯ ಮೇಲೆ ಓಡುತ್ತಿದೆಯೇನೋ, ಯಾವ ಕ್ಷಣದಲ್ಲಿ ಆಳಕ್ಕೆ ಇಳಿದುಬಿಡುತ್ತದೆಯೋ ಎಂದು ಎದೆ ಝುಲ್ಲೆನಿಸುವುದು ಗ್ಯಾರಂಟಿ.

ಮಳೆಗಾಲದಲ್ಲಿ ಪ್ರಯಾಣ ಅಪಾಯಕಾರಿ ಎಂಬ ಕಾರಣಕ್ಕೆ ಗೋವಾ ಸರ್ಕಾರ ಜಲಪಾತ ವೀಕ್ಷಿಸಲು ನಿರ್ಬಂಧ ವಿಧಿಸುತ್ತದೆ. ಈ ಮಾರ್ಗದಲ್ಲಿ ಸಾಗುವ ರೈಲಿನಲ್ಲಿ ಕುಳಿತುಕೊಂಡೇ ಜಲಪಾತದ ಸೌಂದರ್ಯ ಸವಿಯಲು ಸಾಧ್ಯವಿದೆ. ಇದಕ್ಕಾಗಿ ರೈಲನ್ನು ಇಲ್ಲಿ 2 ನಿಮಿಷ ಮಾತ್ರ ನಿಲ್ಲಿಸಲಾಗುತ್ತದೆ. ಬೆಳಗಾವಿ ಅಥವಾ ಹುಬ್ಬಳ್ಳಿಯಿಂದ ಗೋವಾಗೆ ಸಾಗುವ ಪ್ರತಿಯೊಂದು ರೈಲೂ ಈ ಜಲದೇವತೆಯ ದರ್ಶನ ಪಡೆದೇ ಹೋಗಬೇಕು.

ಜಲಪಾತದಿಂದ ಸುಮಾರು 24 ಕಿ.ಮೀ. ದೂರದಲ್ಲಿರುವ ಕ್ಯಾಸಲ್ ರಾಕ್‌ನಿಂದ ಟ್ರೆಕ್ಕಿಂಗ್ ಮಾಡಲು ಅವಕಾಶವಿದೆ. ಆದರೆ, ಇದಕ್ಕೆ ಗೋವಾ ಅರಣ್ಯ ಇಲಾಖೆಯ ಅನುಮತಿ ಕಡ್ಡಾಯ.

ಅಲ್ಲಿನ ಸರ್ಕಾರ ಈ ಪ್ರದೇಶವನ್ನು ಭಗವಾನ್ ಮಹಾವೀರ ಅಭಯಾರಣ್ಯ ಮತ್ತು ಮೊಲೇಂ ರಾಷ್ಟ್ರೀಯ ಉದ್ಯಾನ ಎಂದು ಘೋಷಣೆ ಮಾಡಿದೆ.